# ದಕ ಜಿಲ್ಲಾಡಳಿತ- ಎನ್‌ಐಟಿಕೆ ಒಪ್ಪಂದ

## ನಗರದ ಪ್ರಮುಖ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರಕ್ಕೆ ವಿದ್ಯಾರ್ಥಿಗಳ ಬಳಕೆ



**ಮಂಗಳೂರು:** ಮಂಗಳೂರು ನಗರದ ಘನ ತ್ಯಾಜ್ಯ ವಿಲೇವಾರಿ, ಒಳಚರಂಡಿ ವ್ಯವಸ್ಥೆಯಲ್ಲಿ ಬದಲಾವಣೆ, ವೆನ್ಲಾಕ್ ಆಸ್ಪತ್ರೆಯಲ್ಲಿ ಈ- ಅಪ್ಲಿಕೇಶನ್ ಪರಿಚಯ ಮೊದಲಾದ ಹಲವು ಅಭಿವೃದ್ಧಿ ಯೋಜನೆಗೆ ಸಾಥ್ ನೀಡಲು ದಕ್ಷಿಣ ಕನ್ನಡ ಜಿಲ್ಲಾಡಳಿತವು ಎನ್‌ಐಟಿಕೆ ಜತೆ ಒಪ್ಪಂದ ಮಾಡಿಕೊಂಡಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಂಗಳೂರು ಮಹಾನಗರ ಪಾಲಿಕೆ ಮತ್ತು ಸ್ಮಾರ್ಟ್ ಸಿಟಿ ಯೋಜನೆಯು ಎನ್‌ಐಟಿಕೆ ಜತೆಗೆ ಮಾಡಿದ ಪರಸ್ಪರ ತಿಳಿವಳಿಕಾ ಒಪ್ಪಂದಕ್ಕೆ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಎಂ.ಪಿ. ಮತ್ತು ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಸಹಿ ಹಾಕಿದರು.

ಎನ್‌ಐಟಿಕೆಯು ಜಿಲ್ಲೆಯ ಶಕ್ತಿಯಾಗಿದೆ. ಅದರ ಮೂಲಕ ಜಿಲ್ಲೆಯ ಎಂಜಿನಿಯರಿಂಗ್ ಕಾಲೇಜುಗಳನ್ನು ಬಳಕೆ ಮಾಡಿಕೊಂಡು ಜಿಲ್ಲೆಯ ಸಾರ್ವಜನಿಕ ಕುಂದು ಕೊರತೆಗಳ ಪರಿಹಾರ ಕಂಡುಕೊಳ್ಳಲು ಶೀಘ್ರ ವೇದಿಕೆ ಸಜ್ಜು ಮಾಡಲಾಗುವುದು. ಸ್ಮಾರ್ಟ್ ಸಿಟಿಯ ಕಮಾಂಡ್ ಸೆಂಟರ್ ಬಳಕೆ ಮಾಡಿಕೊಂಡು ಸ್ಮಾರ್ಟ್ ಯೋಜನೆ ರೂಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಮಾತನಾಡಿ, 25ರಷ್ಟು ಎಂಜಿನಿಯರಿಂಗ್, ವೈದ್ಯಕೀಯ ಅಲ್ಲದೆ ಇತರ ವೃತ್ತಿಪರ, ಪದವಿ ಕಾಲೇಜುಗಳು ಜಿಲ್ಲೆಯ ಹೆಮ್ಮೆ. ಅಲ್ಲಿಯ ವಿದ್ಯಾರ್ಥಿಗಳನ್ನು ಬಳಸಿಕೊಂಡು, ನಗರದ ಅಭಿವೃದ್ಧಿ ಮಾಡುವ ದೇಶದ ಪ್ರಥಮ ಮಾದರಿ ಯೋಜನೆ ರೂಪಿಸಲಾಗುವುದು. ಸಾಕಷ್ಟು ಸಂಪನ್ಮೂಲ ನಮ್ಮಲ್ಲಿದೆ ಎಂದರು.

ಜಿಲ್ಲಾ ಪಂಚಾಯಿತಿ ಸಿಇಒ ಡಾ. ಆನಂದ್ ಕೆ., ಮಹಾನಗರ ಪಾಲಿಕೆ ರವಿಚಂದ್ರ ನಾಯಕ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜು, ಮಹಾಪ್ರಬಂಧಕ ಅರುಣ್‌ಪ್ರಭ, ಎನ್‌ಐಟಿಕೆ ಡೀನ್ ಪ್ರಸನ್ನ, ಪ್ರೊ.ಉದಯ ಭಟ್ ಉಪಸ್ಥಿತರಿದ್ದರು.

Vijaya Karnataka, Date: 07/05/25, p, no - 01_ Nama Kudla